ರಾಯರು, 'ಇದಕ್ಕೆ ಸಿಟ್ಟಿಲ್ಲ ತಾನೇ?' ಎಂದು ಹೆಂಡತಿಯ ಮುಖನೋಡಿದರು. ಆಕೆ 'ಇಲ್ಲ' ಎಂಬಂತೆ ತಲೆ ಆಡಿಸಿದ ಮೇಲೆ ರಾಯರು ಮಾತು ಮುಂದುವರಿಸಿದರು.

'ನಾನು ಒಂದು ದಿನ ತರಗತಿಯಲ್ಲಿ ವರ್ಡ್ಸ್‌ವರ್ತ್ ಕವಿಯ ಒಂದು ಕವಿತೆಯನ್ನು ವಿಸ್ತಾರವಾಗಿ ವಿವರಿಸಿ ಅರ್ಥ ಬರೆದುಕೊಳ್ಳಿ ಎಂದು ಹೇಳುತ್ತಿದ್ದೆ. ಎಲ್ಲರೂ ನಾನು ಹೇಳುವುದನ್ನು ಸರಿಯಾಗಿ ಕೇಳಿಸಿಕೊಂಡು ಬರೆಯುತ್ತಿದ್ದರೆ, 'ಸರ್, ನನಗೆ ನೀವು ಸ್ಪೀಡಾಗಿ ಹೇಳಿದರೆ ಸರಿಯಾಗಿ ಬರೆಯಲು ಆಗುತ್ತಿಲ್ಲ. ಸ್ವಲ್ಪ ನಿಧಾನವಾಗಿ ಹೇಳಿ' ಎಂದಳು ಈಕೆ. ನಾನು 'ಓ.ಕೆ.' ಎಂದು ಅವಳ ಬಳಿ ಸಾರಿ ನೋಡಿದರೆ ಆಕೆ ಬರೆದದ್ದೂ ಸಹ ತಪ್ಪಾಗಿತ್ತು. ನಾನು ಅವಳು ಬರೆಯುತ್ತಿದ್ದ ನೋಟುಬುಕ್ಕನ್ನು ಎತ್ತಿ ಹಿಡಿದು ಎಲ್ಲವನ್ನೂ ಓದಿ, 'ತುಂಬ ಪೂರ್ ಇದ್ದೀಯಾ ಇಂಗ್ಲಿಷಿನಲ್ಲಿ, ಹೆಚ್ಚು ಅಧ್ಯಯನ ಮಾಡಬೇಕು' ಎಂದು ಹೇಳುತ್ತಾ ಪಾಠ ಮುಂದುವರಿಸಿ ಪೀರಿಯಡ್ ಮುಗಿಸಿದೆ. ಮಧ್ಯಾಹ್ನದ ಮೇಲೆ ಫಸ್ಟ್ ಪೀರಿಯಡ್‌ನಲ್ಲಿ ನಮ್ಮ ಸ್ಟಾಫ್ ರೂಮಿನಲ್ಲಿ ಆಗ ಯಾರೂ ಇಲ್ಲ ಎಂಬುದನ್ನು ತಿಳಿದ ಹಾಗೆ ಬಂದ ಈಕೆ, 'ಮೇ ಐ ಗೆಟ್ ಇನ್ ಸರ್' ಎಂದು ಕೇಳಿದಾಗ 'ಎಸ್, ಕಮ್ ಇನ್' ಎಂದು ನಾನು ಹೇಳಿದೆ. ನಸುನಗುತ್ತಾ ಒಳಗೆ ಬಂದ ಇವಳು ನನ್ನ ಇದಿರು ನಿಂತು, 'ಸರ್ ನಿಮ್ಮಿಂದ ನನಗೆ ಒಂದು ಉಪಕಾರ ಸಾಧ್ಯವಾ? ಎಂದು ಕೇಳಲು ಬಂದಿದ್ದೇನೆ' ಎಂದಳು.

'ಎಸ್, ಏನದು ಹೇಳು?' ಅಂದೆ. 'ಸರ್, ಇಂಗ್ಲಿಷ್‌ನಲ್ಲಿ ನಾನು ತುಂಬಾ ಪುವರ್ ಇದ್ದೇನೆ ಎನ್ನುವುದು ನಿಮಗೆ ಗೊತ್ತು. ನನಗೆ ಯಾಕೋ ಅದು ನನ್ನ ತಲೆಗೆ ಹೋಗುತ್ತಲೇ ಇಲ್ಲ. ನೀವು ನಿಮ್ಮ ಬಿಡುವಿನಲ್ಲಿ ನಮ್ಮ ಮನೆಗೆ ಬಂದು ನನಗೆ ಟ್ಯೂಶನ್ ಕೊಟ್ಟರೆ ನಾನು ಪಾಸಾದೇನು ಎಂಬ ಆಸೆ ಇದೆ. ಅದೂ ಅಲ್ಲದೆ ಸರ್, ನಿಮ್ಮ ಪಾಠ ಎಷ್ಟು ಚಂದ ಅಂದರೆ...' ಎಂದು ಮಾತು ನಿಲ್ಲಿಸಿದಳು. ನಾನು ಆಗ 'ಯಾಕೆ ಮಾತು ನಿಲ್ಲಿಸಿದೆ. ಎಷ್ಟು ಚಂದ ಅಂತ ಹೇಳು?' ಅಂದೆ. ಆಗ ಆಕೆ ಏನೂ ಹೇಳದೆ ಓಡಿ ಹೋಗಿದ್ದಳು.

'ಎಲಾ ಇವಳೇ! ಏನಾಗಿದೆ ಇವಳಿಗೆ?' ಎಂದು ನಾನು ನನ್ನಷ್ಟಕ್ಕೆ ನಕ್ಕು ಬೆಲ್ ಆದಾಗ ಮುಂದಿನ ಕ್ಲಾಸಿಗೆ ಹೋದೆ. ಕಾಲೇಜು ಬಿಟ್ಟು ಹೊರಡುವಾಗ ಅವಳು ಅವಳ ಗೆಳತಿಯರ ಜೊತೆ ನಾನಿದ್ದಲ್ಲಿಗೆ ಬಂದು 'ಸರ್, ನೀವು ನನ್ನ ಪ್ರಶ್ನೆಗೆ ಉತ್ತರ ಹೇಳಲೇ ಇಲ್ಲ!' ಎಂದಳು. ನಾನು 'ಹೇಳಲಿಕ್ಕೆ ನೀನು ಅಲ್ಲಿದ್ದರೆ ತಾನೇ?' ಎಂದು ನಕ್ಕು, 'ನನ್ನ ಪಾಠ ತುಂಬಾ ಚಂದ ಎಂದೆಯಲ್ಲ ಆಗ; ಎಷ್ಟು ಚಂದ ಅಂದದ್ದಕ್ಕೆ ಉತ್ತರಿಸದೇ ಓಡಿದ್ದು ಯಾಕೆ? ಹೇಳಬಹುದಿತ್ತಲ್ಲ. ಈಗಲಾದರೂ ಹೇಳಿದರೆ ನಿನ್ನ ರಿಕ್ವೆಸ್ಟನ್ನು ನಾನು ಕನ್ಸಿಡರ್ ಮಾಡುತ್ತೇನೆ' ಎಂದೆ. ಆಗ ಇವಳು ನಕ್ಕಳೇ ವಿನಾ ಉತ್ತರಿಸಲಿಲ್ಲ. ಅಷ್ಟರಲ್ಲಿ ಇವಳ ಗೆಳತಿಯರು 'ಹೇಳೇ ಹೇಳೇ' ಎಂದು ಒತ್ತಾಯಿಸಿದರು. ಇವಳು ತಕ್ಷಣ 'ಇಲ್ಲ ಸರ್, ನಾನು ಹೇಳುವುದಿಲ್ಲ' ಎಂದು ದೂರ ಹೋದಳು. ಎರಡು ದಿವಸದ ಮೇಲೆ ನಾನು ಒಬ್ಬಂಟಿಯಾಗಿ ಸ್ಟಾಫ್ ರೂಮಿನಲ್ಲಿ ಇರುವುದನ್ನು ಗಮನಿಸಿ ಮತ್ತೆ ಬಂದ ಇವಳು ನನ್ನ ಎದುರು ನಿಂತು, 'ಮೊನ್ನೆಯ ವಾಕ್ಯ ಕಂಪ್ಲೀಟ್ ಮಾಡಿ ತಂದಿದ್ದೇನೆ ಸರ್' ಎಂದು ನಗುತ್ತಾ ಕೈಯಲ್ಲಿ ಮಡಚಿಟ್ಟ ಚಿಕ್ಕ ಪೇಪರಿನ ಚೂರನ್ನು ನನ್ನ ಟೇಬಲ್ಲಿನ ಮೇಲಿಟ್ಟಳು. ನಾನು ಬಿಡಿಸಿ ನೋಡಿದೆ. 'ನಿಮ್ಮ ಪಾಠ ನಿಮ್ಮಷ್ಟೇ ಚಂದ' ಎಂದು ಅದರಲ್ಲಿ ಬರೆದಿತ್ತು. ನನಗೆ ಮಾತನಾಡಲು ಸ್ವಲ್ಪ ಮುಜುಗರವಾಯಿತು. ಸಣ್ಣಗೆ 'ಥ್ಯಾಂಕ್ಸ್' ಹೇಳಿದೆ. ಆದರೆ, 'ನನ್ನನ್ನು ನೋಡಲು ನಿನ್ನ ಅಪ್ಪನನ್ನು ಕಳುಹಿಸು. ಟ್ಯೂಶನ್ ಕೊಡುತ್ತೇನೆ' ಎಂದೆ.

ಎರಡು ದಿನದ ಮೇಲೆ ರಸ್ತೆ ಬದಿಯಲ್ಲಿ ನನ್ನನ್ನೇ ಕಾದು ನಿಂತಂತಿದ್ದ ಒಬ್ಬ ವ್ಯಕ್ತಿ ನಾನು ಅವರ ಬಳಿ ಬರುತ್ತಿದ್ದ ಹಾಗೆ 'ಸರ್, ನಮಸ್ಕಾರ' ಎಂದಿತು. ನಾನು ಪ್ರತಿ ನಮಸ್ಕರಿಸಿ 'ಏನು?' ಎಂದೆ. ಆತ 'ನಾನು ಸರೋಜಾಳ ಅಪ್ಪ ಬಂಡಸಾಲೆ ರಾಮಣ್ಣ ಶೆಟ್ಟಿ' ಎಂದ. 'ಓಹ್, ಪರಿಚಯವಾಯ್ತು ಬಿಡಿ. ಏನು ಮಾತನಾಡಬೇಕಿತ್ತು?' ಎಂದೆ. ಶೆಟ್ಟರು ಅತ್ಯಂತ ವಿನಯದಿಂದ 'ನನ್ನ ಮಗಳಿಗೆ ಇಂಗ್ಲಿಷ್ ಅಂದ್ರೆ ತುಂಬಾ ಕಷ್ಟ ಸರ್. ಎಸ್ಸೆಸ್ಸೆಲ್ಸಿಯಲ್ಲಿ ಒಂದು ವರ್ಷ ಫೇಲಾಗಿ ಎರಡನೇ ವರುಷ ಹೇಗೋ ಪಾಸಾಗಿದ್ದಾಳೆ. ಈಗ ಪಿ.ಯು.ಸಿ.ಯಲ್ಲಿರುವುದು ನಿಮಗೆ ಗೊತ್ತು ತಾನೇ? ಈ ವರ್ಷ ಫೇಲಾದರೆ ಬಹುಶಃ ಅವಳ ಎರಡು ವರ್ಷ ವೇಸ್ಟಾಗುತ್ತದೆ. ಬರುವ ವರುಷದಿಂದ ಪಿ.ಯು.ಸಿ. ಎರಡು ವರ್ಷದ ಕೋರ್ಸು ಎಂದು ಕೇಳಿದ್ದೆ' ಎಂದರು.

'ಹೌದು, ಒಂದು ವರುಷದ ಪಿ.ಯು. ಸಿ. ಕೋರ್ಸು ಈ ವರುಷಕ್ಕೇ ಮುಕ್ತಾಯ. ಬರುವ ವರುಷದಿಂದ ಎರಡು ವರ್ಷದ್ದು ಅಂತ ಶಿಕ್ಷಣ ಇಲಾಖೆ ನಿರ್ಧರಿಸಿ ಆದೇಶವೂ ಹೊರಡಿಸಿದೆ. ಈ ವರುಷ ಆಕೆ ಪಾಸಾಗುವುದು ಅವಶ್ಯ ಇದೆ ಎನ್ನುವುದು ಸರಿ' ಎನ್ನುತ್ತಾ ನನ್ನ ಜೊತೆ ಹೆಜ್ಜೆ ಹಾಕುತ್ತಿದ್ದ ಶೆಟ್ಟರಾಚೆ ತಿರುಗಿದ ನಾನು, 'ಆಕೆಗೆ ಟ್ಯೂಶನ್ ಕೊಡಲಿಕ್ಕೆ ಖಂಡಿತ ಬರುತ್ತೇನೆ. ಸಂಜೆ ಆರರಿಂದ ಏಳರವರೆಗೆ ಆಗಬಹುದಾದರೆ ಹೇಳಿ' ಎಂದೆ. ಶೆಟ್ಟರು ಕೈಮುಗಿದರು. 'ಸರಿ ಸರ್, ನೀವು ಟ್ಯೂಶನ್ ಯಾವಾಗ ಪ್ರಾರಂಭ ಮಾಡಿದರೂ ಸರಿಯೇ. ನಮ್ಮ ಮನೆ ಪೇಟೆಯಲ್ಲೇ ಇದೆ. ಇಲ್ಲಿಂದ ಎರಡು ಫರ್ಲಾಂಗು ಅಷ್ಟೇ. ಈ ದಿನವೇ ಬಂದು ನಮ್ಮ ಮನೆ ನೋಡಿ ಹೋಗುವುದಾದರೆ ಬನ್ನಿ. ಇಲ್ಲಾ ನೀವು ಹೇಳಿದ ದಿನ ನಾನೇ ಬಂದು ನಿಮ್ಮನ್ನು ಕರೆದೊಯ್ಯುತ್ತೇನೆ' ಎಂದರು.

'ಛೆ! ನೀವು ಮತ್ತೆ ಬರುವುದು ಬೇಡ. ಈ ದಿನವೇ ನಿಮ್ಮಲ್ಲಿಗೆ ಬರುತ್ತೇನೆ. ನಡೀರಿ' ಎಂದೆ.

ನಾವು ಅವರ ಮನೆಗೆ ತಲುಪಿದಾಗ ಈ ಸರೋಜ ಒಳಗೆಲ್ಲೋ ಕೆಲಸದಲ್ಲಿದ್ದಳು. ಶೆಟ್ಟರು ನನ್ನನ್ನು ತಮ್ಮ ಮನೆಯ ಚಾವಡಿಯಲ್ಲಿ ಕೂರಿಸಿ ಅಲ್ಲಿಂದಲೇ 'ಸರೋಜಾ' ಎಂದು ಕೂಗುತ್ತ, 'ನೋಡು, ನಿನ್ನ ಇಂಗ್ಲಿಷ್ ಮೇಷ್ಟ್ರು ಬಂದಿದ್ದಾರೆ. ನಿನ್ನಮ್ಮನನ್ನು ಕರಿ' ಎಂದರು.

ಒಳಗಿದ್ದ ಸರೋಜ ಕೆದರಿದ್ದ ತಲೆಕೂದಲನ್ನು ನೇವರಿಸಿಕೊಳ್ಳುತ್ತಾ ಮನೆಯುಡುಗೆಯಲ್ಲೇ ಜಿಂಕೆಯ ಹಾಗೆ ಹೊರ ಬಂದಳು. ಇಷ್ಟಗಲ ಕಣ್ಣು ಅರಳಿಸಿ ನನಗೆ ಕೈಮುಗಿದಳು. 'ನಮಸ್ಕಾರ ಸರ್. ಥ್ಯಾಂಕ್ ಯೂ' ಎನ್ನುತ್ತಿದ್ದ ಹಾಗೆ ಅವಳಮ್ಮನೂ ನಿಧಾನವಾಗಿ ಬಂದು ಕೈಮುಗಿದರು. 'ಇವತ್ತೇ ಬಂದಿರಾ? ಒಳ್ಳೇದು' ಎಂದು ಕುಶಲ ವಿಚಾರಿಸಿದರು. 'ಸರ್, ನಿಮಗೆ ಕಾಫಿಯೋ ಟೀಯೋ ಯಾವುದು ಹೇಳಿ?' ಎಂದು ಉಪಚರಿಸಲು ಹೊರಟರು.

ನಾನು 'ಈ ದಿನ ನೀವು ಕಾಫಿ ಕೊಡಬಹುದು. ಆದರೆ ಮುಂದೆ ನಾನು ಬಂದಷ್ಟು ಸಲ ನೀವು ಕಾಫಿ ಮಾತ್ರವಲ್ಲ, ಏನನ್ನೂ ಕೊಡಬಾರದು. ಕೊಡುವಿರಾದರೆ ಅದು ನನಗೆ ಮುಜುಗರ ಆಗುತ್ತದೆ. ನಾನು ಜಸ್ಟ್ ಬರುತ್ತೇನೆ. ಬಂದ ಹಾಗೇ ಟ್ಯೂಶನ್ ಕೊಟ್ಟು ಹೋಗುತ್ತೇನೆ. ನನ್ನದೇನಿದ್ದರೂ ಒಂದು ಗಂಟೆಯ ಟ್ಯೂಶನ್' ಎಂದೆ.

'ಅದು ಹೇಗಾಗುತ್ತದೆ ಸರ್. ಇದು ಮನೆಯಲ್ಲವೇ?' ಎಂದು ಸರೋಜಳ ತಾಯಿ ವೆಂಕಮ್ಮ ಒತ್ತಾಯಿಸಿದರು. 'ನಾನು ಇಲ್ಲ ಅಂದರೆ ಮುಗಿಯಿತು. ಮತ್ತೆ ನೀವು ಒತ್ತಾಯಿಸುವ ಹಾಗಿಲ್ಲ' ಎಂದೆ.

ಇದೇ ತಕ್ಕ ಸಮಯ ಎಂಬಂತೆ ರಾಮಣ್ಣ ಶೆಟ್ಟರು 'ಸರ್, ದಯವಿಟ್ಟು ತಪ್ಪು ತಿಳಿಯದಿದ್ದರೆ ಒಂದು ಮಾತು ಹೇಳುತ್ತೇನೆ. ನಾನೂ ನಿಮ್ಮ ಹಾಗೆ ವ್ಯವಹಾರ ಅಂದರೆ ವ್ಯವಹಾರ ಮಾತ್ರ ಎಂದುಕೊಂಡವನು! ಹಾಗಾಗಿ ತಿಂಗಳಿಗೆ ಎಷ್ಟು ಫೀಜು ಅಥವಾ ಒಟ್ಟು ಎಷ್ಟು ಕೊಡಬೇಕು?' ಎಂದು ಮೆತ್ತಗಿನ ಮಾತಿನಲ್ಲಿ ಅರಿಕೆ ಮಾಡಿದರು.

ನಾನು 'ಈ ತನಕ ಟ್ಯೂಶನ್ ಫೀಸು ತೆಗೆದುಕೊಂಡವನೇ ಅಲ್ಲ ಶೆಟ್ಟರೇ. ಟ್ಯೂಶನ್ ಕೊಟ್ಟವನೂ ಅಲ್ಲ. ಈ ವಿಚಾರದಲ್ಲಿ ನನ್ನದು ಏನೂ ಕಂಡೀಶನ್ ಇಲ್ಲ. ಸುಮ್ಮನೇ ಬರುತ್ತೇನೆ, ಸುಮ್ಮನೇ ಹೋಗುತ್ತೇನೆ. ಕೊನೆಗೆ ಅವಳ ಪ್ರೊಗ್ರೆಸ್ ನೋಡಿಕೊಂಡು ಫೀಸು ಅಂತ ಅಲ್ಲ, 'ಇಷ್ಟು ಕೊಡಿ' ಎಂದು ಹೇಳುತ್ತೇನೆ. ಸದ್ಯಕ್ಕಂತೂ ಆ ಮಾತು ಬೇಡ' ಎಂದೆ.

ಶೆಟ್ಟರಲ್ಲಿ 'ಅಲ್ಲ ಸರ್, ಅದು ನಿಗದಿಯಾಗಲಿ' ಎಂದು ಹೇಳಬೇಕೆನ್ನುವ ತುಡಿತ ಇತ್ತು. ಆದರೆ ಅವರು ಆ ಮಾತೆತ್ತಿದರೆ ನಾನು ಟ್ಯೂಶನ್ ಕೊಡುವುದಿಲ್ಲವೆಂದು, ಹೇಳಿದರೆ ಸರೋಜ ಈ ವರ್ಷ ಫೇಲಾದ ಹಾಗೇ ಎಂದುಕೊಂಡು ಸುಮ್ಮನಾದರು.

ಅಷ್ಟರಲ್ಲಿ ವೆಂಕಮ್ಮ ಕಾಫಿ ಮತ್ತು ಗರಿಮುರಿ ಚಕ್ಕುಲಿ ಮತ್ತು ಗೋಧಿ ಹಲ್ವ ತಂದಿಟ್ಟರು. 'ನಮ್ಮ ದೊಡ್ಡಮಗ ಮೊನ್ನೆ ಮಿಲಿಟರಿ ಕ್ಯಾಂಪಿನಿಂದ ಬಂದಿದ್ದ. ಇದು ಅವನು ತಂದದ್ದು. ತುಂಬಾ ಫ್ರೆಶ್ ಇದೆ' ಎಂದು ಹೇಳಿ 'ತಗೊಳ್ಳಬೇಕು ಸರ್' ಎಂದರು.

ನಾನು ಹಲ್ವವನ್ನು ಬಾಯಿಯಲ್ಲಿಟ್ಟು ತುಂಡರಿಸಿ 'ನಿಮ್ಮ ಹೆಸರಿನ ಹಿಂದೆ ಬಂಡಸಾಲೆ ಅಂತ ಇದೆಯಲ್ಲ ಶೆಟ್ಟರೇ, ಅದು ಊರ ಹೆಸರೋ ಅಥವಾ ವೃತ್ತಿನಾಮವೋ?' ಎಂದು ಪ್ರಶ್ನಿಸಿದೆ.

(ಸಶೇಷ)